ದಿನಾಂಕಃ **10.06.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಂ.ಆರ್. ವಕೀಲರಿಂದ ಃ**

01. ನಾನು ಪಿ.ಯು.ಸಿ. ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಅಂಶಗಳು ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು 2 ನೇ ಪ್ರತಿವಾದಿ ಹೇಳಿ ತಯಾರು ಮಾಡಿಸಿರುತ್ತಾರೆ. ಪ್ರಸ್ತುತ ದಾವೆಯನ್ನು ಯಾರು ದಾಖಲು ಮಾಡಿರುತ್ತಾರೆ ಎಂದು ಹೇಳಲು ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಸಣ್ಣ ತಿಮ್ಮೇಗೌಡರವರ ವಿರುದ್ಧ ದಾಖಲು ಮಾಡಲಾಗಿದೆ. ಕೇಸು ದಾಖಲಿಸಿದವರು ದಾವಾ ಸ್ವತ್ತು ಅವರಿಗೆ ಸೇರಬೇಕು ಎಂದು ಸಣ್ಣ ತಿಮ್ಮೇಗೌಡರವರ ವಿರುದ್ಧ ದಾವೆಯನ್ನು ದಾಖಲು ಮಾಡಿರುತ್ತಾರೆ. ದಾವಾ ಸ್ವತ್ತಿನ ಸರ್ವೇ ನಂ-268 ಆಗಿರುತ್ತದೆ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ದೊಡ್ಡತಿಮ್ಮೇಗೌಡರವರ ಸ್ವತ್ತು, ಪಃ ನನಗೆ ಸೇರಿದ ಸ್ವತ್ತು, ಉಃ ತೋಟಗಾರಿಕೆ ಫಾರಂ, ದಃ ತಿಮ್ಮೇಗೌಡರವರ ಜಮೀನು ಇದೆ.

2. ಪ್ರತಿವಾದಿ ವಾದಿಯವರು ವಿರುದ್ಧ ದಾಖಲಿಸಿದ್ದ ಅಸಲು ದಾವಾ ಸಂಖ್ಯೆ -9/2022 ಇದರಲ್ಲಿ ನಾನು ಪಕ್ಷಕಾರನಾಗಿರಲಿಲ್ಲ. ಸದರಿ ದಾವೆಯಲ್ಲಿ ನಾನು ಸಾಕ್ಷಿಯಾಗಿ ನುಡಿದಿರುವುದಿಲ್ಲ. ಪ್ರಸ್ತುತ ದಾವೆಯನ್ನು ವಾದಿ ಸರ್ವೇ ನಂ-268/ಪೈ-ಪಿ-2 ಸ್ವತ್ತಿಗೆ ಸಂಬಂದಿಸಿದಂತೆ ದಾಖಲು ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ವಾದಿಯವರ ಜಮೀನು, ಪಃ ಚಿಕ್ಕದಾಸೇಗೌಡರ ರಾಮೇಗೌಡರ ಜಮೀನು, ಉಃ ತೋಟಗಾರಿಕೆ ಫಾರಂ ಏರಿ, ದಃ ತಮ್ಮಂಡಯ್ಯನ ಕರಿಗೌಡರವರ ಜಮೀನು ಎಂದರೆ ಸರಿ.

3. ಅಸಲು ದಾವಾ ಸಂಖ್ಯೆ-9/2022 ನ್ನು ಪ್ರತಿವಾದಿಯವರು ವಾದಿಯ ವಿರುದ್ಧ ಸರ್ವೇ ನಂ-268 ರಲ್ಲಿನ 24 ಗುಂಟೆ ಸ್ವತ್ತಿಗೆ ಸಂಬಂದಿಸಿದಂತೆ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ

ದಾವೆಯ ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ವಾದಿಯವರ ಜಮೀನು, ಪಃ ಚಿಕ್ಕದಾಸೇಗೌಡರ ರಾಮೇಗೌಡರ ಜಮೀನು, ಉಃ ತೋಟಗಾರಿಕೆ ಫಾರಂ ಏರಿ, ದಃ ತಮ್ಮಂಡಯ್ಯನ ಕರಿಗೌಡರವರ ಜಮೀನು ಎಂದರೆ ಸರಿ. ಎರಡು ದಾವೆ ದಾವಾ ಸ್ವತ್ತುಗಳ ಸರ್ವೇ ನಂಬರ್ ಬೇರೆ ಬೇರೆಯಾಗಿದ್ದು, ಎರಡು ಬೇರೆ ಬೇರೆ ಜಮೀನಗಳಾಗಿದ್ದು, ಪ್ರತಿವಾದಿಗಳ ಜಮೀನು ಪೈಕಿ ಹೊಂದಿಲ್ಲ ಮತ್ತು ವಾದಿಯವರ ಜಮೀನಿಗೆ ಪೈಕಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎರಡು ದಾವಾ ಸ್ವತ್ತುಗಳ ಚೆಕ್ಕುಬಂದಿ ಬೇರೆ ಮತ್ತು ಒಂದು ಸ್ವತ್ತಿಗೆ ಪೈಕಿಯಾಗಿ ಮತ್ತೊಂದು ಸ್ವತ್ತಿಗೆ ಪೈಕಿಯಾಗದ ಕಾರಣ ಎರಡು ಸ್ವತ್ತುಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಸರ್ವೇ ನಂ-268 ಎಷ್ಟು ಪೈಕಿಯಾಗಿರುತ್ತದೆ ಮತ್ತು ಎಷ್ಟು ವಿಸ್ತೀರ್ಣದ ಸ್ವತ್ತು ಇದೆ ಎಂದು ಹೇಳಲು ಗೊತ್ತಿಲ್ಲ. ಪ್ರಸ್ತುತ ದಾವಾ ಸ್ವತ್ತು ಮತ್ತು ಅಸಲು ದಾವಾ ಸಂಖ್ಯೆ-9/2022ರ ದಾವಾ ಸ್ವತ್ತು ಬೇರೆ ಬೇರೆ ಎಂದರೆ ನನಗೆ ಗೊತ್ತಿಲ್ಲ.

4. ದಾವಾ ಸ್ವತ್ತು ದಿಃ 05.01.1972ರ ರಂದು ನೊಂದಾಯಿತ ವ್ಯವಸ್ಥಾ ಪತ್ರದಂತೆ ವಾದಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಅಂದಿನಿಂದಲೂ ದಾವಾ ಸ್ವತಿಗೆ ಸಂಬಂದಿಸಿದ ಪತ್ರಗಳು ವಾದಿಯವರ ಹೆಸರಿನಲ್ಲಿ ಇದ್ದು, ಅವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದುಕೊಂಡು ಸರ್ಕಾರಕ್ಕೆ ನಿರಂತರವಾಗಿ ಕಂದಾಯವನ್ನು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೇಲೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಸ್ವದೀನ ಇಲ್ಲದೇ ಇದ್ದರು ಸಹ ವಾದಿಗಳ ಸ್ವಾದೀನಾನುಭವಕ್ಕೆ ತೊಂದರೆ ಕೊಡುತ್ತಿದ್ದು, ಆ ಕಾರಣ ಸದರಿ ದಾವೆಯನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವದೀನಾನುಭವದಲ್ಲಿ ವಾದಿಯವರು ಇರುತ್ತಾರೆ ಎಂಬ ವಿಷಯ ಗೊತ್ತಿದ್ದರು ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ, ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ವಾದಿ ಯಾರ ಹೆಸರಿಗೂ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ-9/2022ರ ದಾವಾ ಸ್ವತ್ತಿಗೆ

ಸಂಬಂದಿಸಿದಂತೆ ಪ್ರತಿವಾದಿಗೆ ಕ್ರಯಪತ್ರವಾಗಿದ್ದು, ಪ್ರಸ್ತುತ ದಾವಾ ಸ್ವತ್ತಿಗೂ ಆ ಕ್ರಯ ಪತ್ರಕ್ಕು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಿಃ 05.01.1972ರ ರಂದು ನೊಂದಾಯಿತ ವ್ಯವಸ್ಥಾ ಪತ್ರದ ಮೇಲೆ ವಾದಿಗಳು ಅಂದಿನಿಂದಲೂ ಇಲ್ಲಿಯತನಕ ದಾವಾ ಸ್ವತ್ತಿನಲ್ಲಿ ಸ್ವಾದೀನಾನುಭವದಲ್ಲಿದ್ದು, ಈ ವಿಷಯ ತಿಳಿದಿದ್ದರು ಸಹ ಪ್ರತಿವಾಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**